ಕರ್ನಾಟಕ ಸರ್ಕಾರದ ನಡವಳಿಗಳು

ಬಿ. ಬಿ. ಎಂ. ಪಿ. ಮುಖ್ಯ ಆಯುಕ್ತರವರ ಆಪ್ತ ಕಾರ್ಯಾಲಯ
ಸಂಖ್ಯೆ ಪಿ. ಎಸ್. ಆರ್. (1) 949
ದಿನಾಂಕ 13.5.2021

ವಿಷಯ: ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎನ್‌ವೈ 2018, ದಿನಾಂಕ: 20-09-2019ರ ಮಾನ್ಯ "ಮುಖ್ಯಮಂತ್ರಿಗಳ ನವ ನಗರೋತ್ಥಾನ ಯೋಜನೆ"ಯಡಿ ಕೈಗೊಳ್ಳಲು ಉದ್ದೇಶಿಸಿರುವ "Development Works to be under taken in Ward No.5 of BBMP around solid waste disposal processing units Bellahalli, Bagaluru and Kattigenahalli Byatarayanapura constituency" ಪ್ಯಾಕೇಜಿನ ಕಾಮಗಾರಿಗಳ ಅಂದಾಜು ಮೊತ್ತ ರೂ.12.50 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಟೆಂಡರ್‌ಗೆ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎನ್‌ವೈ 2018, ದಿನಾಂಕ: 20-09-2019.
2. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಪತ್ರ ಸಂಖ್ಯೆ: ಪಿಆರ್ (ಜಿ)/4644/2020-21, ದಿನಾಂಕ: 04-12-2020.
3. ದಿನಾಂಕ: 06-03-2021 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ನಡವಳಿ.

* * * * *

ಪ್ರಸ್ತಾವನೆ:
ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ: 20-09-2019ರ ಆದೇಶದಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ 2018-19ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿ ಒದಗಿಸಿರುವ ಅನುದಾನದಲ್ಲಿ ಕೈಗೊಳ್ಳಲು ಉದ್ದೇಶಿಸಿ, ಅನುಬಂಧ-5ರ ಕ್ರಮ ಸಂಖ್ಯೆ: 23 ರಡಿ "Development Works to be under taken in Ward No.5 of BBMP around solid waste disposal processing units Bellahalli, Bagaluru and Kattigenahalli Byatarayanapura constituency" ಕಾಮಗಾರಿಗೆ ಅನುಮೋದನೆ ನೀಡಿ ರೂ. 1250.00 ಲಕ್ಷಗಳ ಅನುದಾನ ನಿಗಧಿಪಡಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ದಿನಾಂಕ: 04-12-2020ರ ಪತ್ರದಲ್ಲಿ, ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎನ್‌ವೈ 2018, ದಿನಾಂಕ: 20-09-2019ರ ಕ್ರಿಯಾ ಯೋಜನೆ ಅನುಬಂಧ-5ರ ಕ್ರಮ ಸಂಖ್ಯೆ: 23 ರಲ್ಲಿ "Development Works to be under taken in Ward No.5 of BBMP around solid waste disposal processing units Bellahalli, Bagaluru and Kattigenahalli Byatarayanapura constituency" ಯಲಹಂಕ ವಲಯ ಯೋಜನಾ ವಿಭಾಗ ಕಚೇರಿಯಿಂದ ಟೆಂಡರ್ ಸಂಖ್ಯೆ: BBMP/YNK/EE(Project)/TEND/07/2020-21, ದಿನಾಂಕ: 10-07-2020 ರಂತೆ ದ್ವಿ-ಲಕೋಟೆ ಪದ್ಧತಿಯಂತೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ರೂ.1047.05 ಲಕ್ಷಗಳಿಗೆ (ಟೆಂಡರ್‌ಗಿಟ್ಟ ಮೊತ್ತ) ಟೆಂಡರ್ ಆಹ್ವಾನಿಸಲಾಗಿರುತ್ತದೆ. ಸದರಿ ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ದಿನಾಂಕ: 28-07-2020 ರಂದು ತೆರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿ 03 ಜನ ಗುತ್ತಿಗೆದಾರರು ಭಾಗವಹಿಸಿದ್ದು, ಅದರಲ್ಲಿ ಇಬ್ಬರು ಗುತ್ತಿಗೆದಾರರು ತಾಂತ್ರಿಕವಾಗಿ ಅರ್ಹರಾಗಿರುತ್ತಾರೆ. ದಿನಾಂಕ: 17-11-2020 ರಂದು ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ತಾಂತ್ರಿಕ ಮೌಲ್ಯಮಾಪನ ಸಮಿತಿ ಸಭೆಯಲ್ಲಿ ತಾಂತ್ರಿಕ ಬಿಡ್‌ಗೆ ಅನುಮೋದನೆ ನೀಡಿ ಆರ್ಥಿಕ ಬಿಡ್‌ನ್ನು ತೆರೆಯಲು ಅನುಮೋದನೆ ನೀಡಿರುವಂತೆ ದಿನಾಂಕ: 23-11-2020 ರಂದು ತೆರೆಯಲಾಗಿದ್ದು, ಏವರ ಈ ಕೆಳಕಂಡಂತಿದೆ ಎಂದು ಬಿಬಿಎಂಪಿ ಆಯುಕ್ತರು ತಿಳಿಸಿರುತ್ತಾರೆ.

ಎಲುರ ಆಯುಕ್ತರು (ಆಡಳಿತ) ರವರ ಆಪ್ತ ಶಾಖೆ
ಸಂ: ಅ.ಆ (ಅ) PR 556/2021-22
ದಿನಾಂಕ: 24/05/2021

. . .2.

Scanned by TapScanner

| ಕ್ರಮ ಸಂಖ್ಯೆ | ಕಾಂತ್ರಿಕ ಮೌಲ್ಯಮಾಪನದಲ್ಲಿ ಅರ್ಹರಾದ ಗುತ್ತಿಗೆದಾರರು | ಅಂದಾಜು ಮೊತ್ತ (ರೂ. ಗಳಲ್ಲಿ) | ಟೆಂಡರ್‌ಗಟ್ಟಿ ಮೊತ್ತ (ರೂ. ಗಳಲ್ಲಿ) | ಟೆಂಡರ್‌ನಲ್ಲಿ ಸಮೂದಿಸಿರುವ ಮೊತ್ತ (ರೂ. ಗಳಲ್ಲಿ) | ಟೆಂಡರ್ ಮೊತ್ತ ಹೆಚ್ಚು/ಕಡಿಮೆ |
|---|---|---|---|---|---|
| 1 | Sri ATTAPPANAHALLI GIRIYAPPA NARAYANASWAMY | 1250.00 | 10,47,05,392.70 | 10,97,25,017.78 | (+)4.79% |
| 2 | Sri V. Krishna Reddy (V KRISHNAREDDY) | | | 11,51,44,989.03 | (+)9.97% |

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಕಾಮಗಾರಿಯ ಅಂದಾಜು ಮೊತ್ತ ರೂ.1250.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಕಡಿಮೆ ಮೊತ್ತದ ಟೆಂಡರ್‌ದಾರರಾದ ರವರ ಟೆಂಡರ್‌ನ ಮೊತ್ತ ರೂ.10,97,25,017.78 ಕೇ.4.98 ರಷ್ಟು ಹೆಚ್ಚುವರಿ ದರಗಳಿಗೆ ಮಂಜೂರಾತಿಯನ್ನು ನೀಡುವಂತೆ ಬಿಬಿಎಂಪಿ ಆಯುಕ್ತರು ಕೋರಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ದಿನಾಂಕ: 06-03-2021 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ಮುಂದೆ ಬಿ.ಬಿ.ಎಂ.ಪಿ. ಆಯುಕ್ತರ ದಿನಾಂಕ: 04-12-2020ರ ಪ್ರಸ್ತಾವನೆಯನ್ನು ಮಂಡಿಸಲಾಗಿದ್ದು, ಅಧಿಕಾರಯುಕ್ತ ಸಮಿತಿ ಸಭೆಯಲ್ಲಿ ವಿಷಯವನ್ನು ಚರ್ಚಿಸಿ ಈ ಕೆಳಕಂಡಂತೆ ನಿರ್ಣಯಿಸಲಾಗಿದೆ.

"ವಿವರವಾದ ಚರ್ಚೆಯ ನಂತರ "Development Works to be under taken in Ward No.5 of BBMP around solid waste disposal processing units Bellahalli, Bagaluru and Kattigenahalli Byatarayanapura constituency" ಪ್ಯಾಕೇಜಿನ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಿ, Sri ATTAPPANAHALLI GIRIYAPPA NARAYANASWAMY ರವರ ಸಂಧಾನಿತ ಬಿಡ್ಡನ್ನು ಟೆಂಡರ್‌ಗಿಟ್ಟಿ ಮೊತ್ತವಾದ ರೂ. 10,47,05,392.72 ಗಳಿಗೆ ಹೋಲಿಸಿದಾಗ 1.00% ಅಧಿಕ ಅಂದರೆ ರೂ. 10,57,52,446.65 ಗಳಿಗೆ ಮಿತಿಗೊಳಿಸಿ ಅನುಮೋದಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು"

**ಸರ್ಕಾರಿ ಆದೇಶ ಸಂಖ್ಯೆ: ನಅಇ 276 ಎಂಎನ್‌ಪೈ 2020,**
**ಬೆಂಗಳೂರು, ದಿನಾಂಕ: 12-05-2021.**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎನ್‌ಪೈ 2018, ದಿನಾಂಕ: 20-09-2019ರ ಕ್ರಿಯಾ ಯೋಜನೆ ಅನುಬಂಧ-5ರ ಕ್ರಮ ಸಂಖ್ಯೆ: 23 ರಲ್ಲಿನ ಕಾಮಗಾರಿಗಳಲ್ಲಿ "Development Works to be under taken in Ward No.5 of BBMP around solid waste disposal processing units Bellahalli, Bagaluru and Kattigenahalli Byatarayanapura constituency" ಪ್ಯಾಕೇಜಿನ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಿ, ದಿನಾಂಕ: 06-03-2021 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ನಿರ್ಣಯದಂತೆ Sri ATTAPPANAHALLI GIRIYAPPA NARAYANASWAMY ರವರ ಸಂಧಾನಿತ ಬಿಡ್ಡನ್ನು ಟೆಂಡರ್‌ಗಿಟ್ಟಿ ಮೊತ್ತವಾದ ರೂ. 10,57,52,446.65 (ಹತ್ತು ಕೋಟಿ ಐವತ್ತೇಳು ಲಕ್ಷದ ಐವತ್ತೇರಡು ಸಾವಿರಲದ ನಾಲ್ಕುನೂರ ನಾಲವತ್ತಾರು ರೂಪಾಯಿ ಮತ್ತು ಅರವತ್ತೈದು ಪೈಸೆಗಳು ಮಾತ್ರ) ಗಳಿಗೆ ಮಿತಿಗೊಳಿಸಿ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಟೆಂಡರ್‌ಗೆ ಅನುಮೋದನೆಯನ್ನು ನೀಡಿದೆ.

**ಷರತ್ತುಗಳು:**

1. ಕಾಮಗಾರಿಗಳಿಗೆ ಬಿಡ್‌ದಾರರು ಒಪ್ಪದ ಪಕ್ಷದಲ್ಲಿ ಮರು ಟೆಂಡರ್ ಕರೆಯುವುದು.
2. ಮೇಲಿನ ಕಾಮಗಾರಿಗಳನ್ನು ಕೆ.ಟಿ.ಪಿ.ಪಿ. ಕಾಯ್ದೆ / ನಿಯಮಗಳು ಹಾಗೂ ಎಲ್ಲಾ ಚಾಲ್ತಿ ನಿಯಮಗಳನ್ನು ಪಾಲಿಸಿಕೊಂಡು ಅನುಷ್ಠಾನಗೊಳಿಸುವುದು.

. . .3.

Scanned by TapScanner

3. ಈ ಕಾಮಗಾರಿಗೆ ತಗಲುವ ವೆಚ್ಚವನ್ನು ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎನ್‌ವೈ 2018, ದಿನಾಂಕ: 20-09-2019ರ "ಮುಖ್ಯಮಂತ್ರಿಗಳ ನವ ನಗರೋತ್ಥಾನ" ಯೋಜನೆಯ ಅನುದಾನದಲ್ಲಿ ಮೀಸಲಿಟ್ಟಿರುವ ಅನುದಾನದಲ್ಲಿ ಭರಿಸುವುದು.
4. ಮೇಲಿನ ಕಾಮಗಾರಿಯನ್ನು ಸರ್ಕಾರದಿಂದ ಮಂಜೂರಾದ ಮೊತ್ತದ ಮಿತಿಯಲ್ಲಿಯೇ ಯಾವುದೇ ಹೆಚ್ಚುವರಿಯಾಗದಂತೆ ಅನುಷ್ಠಾನಗೊಳಿಸಲು ಕ್ರಮ ವಹಿಸತಕ್ಕದ್ದು.
5. ಸರ್ಕಾರವು ಕಾಮಗಾರಿಗಳಿಗೆ ಆಡಳಿತಾತ್ಮಕ ಮತ್ತು ಟೆಂಡರ್‌ಗಳಿಗೆ ಅನುಮೋದನೆ ನೀಡಿದ್ದಾಗ್ಯೂ ಸಹ ಕಾಮಗಾರಿಯು ಪುನರಾವರ್ತನೆ ಆಗದಂತೆ ನೋಡಿಕೊಳ್ಳತಕ್ಕದ್ದು. ಅನುಮೋದನೆ ಗೊಂಡಿರುವ ಕಾಮಗಾರಿಯನ್ನಲ್ಲದೆ ಯಾವುದೇ ಕಾರಣಕ್ಕೆ ಬೇರೆ ಕಾಮಗಾರಿಗಳನ್ನು ಕೈಗೊಳ್ಳಬಾರದು.
6. ಕರ್ನಾಟಕ ಆರ್ಥಿಕ ಸಂಹಿತೆ 1958 ಸಾಧಿಲ್ವಾರು ವೆಚ್ಚ ಕೈಪಿಡಿ ಅಧಿನಿಯಮ ಹಾಗೂ ಕಾಲಕಾಲಕ್ಕೆ ಚಾಲ್ತಿಯಲ್ಲಿರುವ ಎಲ್ಲಾ ಕಾಯ್ದೆ ನಿಯಮಗಳುಸಾರ ಕ್ರಮವಹಿಸತಕ್ಕದ್ದು.
7. ಮೇಲಿನ ಕಾಮಗಾರಿಗೆ 3rd Party Quality Monitors ಗಳನ್ನು ನೇಮಿಸಿಕೊಂಡು ಉತ್ತಮ ಗುಣಮಟ್ಟದಿಂದ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಕ್ರಮ ವಹಿಸತಕ್ಕದ್ದು.
8. ದಿನಾಂಕ: 06-03-2021ರ ಅಧಿಕಾರಯುಕ್ತ ಸಮಿತಿ ಸಭೆಯ ನಡವಳಿಯಲ್ಲಿ ನಮೂದಿಸಿರುವ ಎಲ್ಲಾ ಷರತ್ತು ಹಾಗೂ ನಿಬಂಧನೆಗಳನ್ನು ತಪ್ಪದೆ ಪಾಲಿಸತಕ್ಕದ್ದು.
9. ಸದರಿ ಬಿಡ್ದುದಾರರು ಅಥವಾ ಇನ್ಯಾವುದೇ ಹಂತದಲ್ಲಿ ತಪ್ಪು ಮಾಹಿತಿ / ದಾಖಲೆ ನೀಡಿರುವುದು ಕಂಡುಬಂದಲ್ಲಿ ಟೆಂಡರ್‌ಅನ್ನು ರದ್ದುಪಡಿಸಲು ನಿಯಮಾನುಸಾರ ಕ್ರಮ ವಹಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಲಕ್ಷ್ಮೀ ನಾಗರ್ ಎನ್.ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ.)

ಇವರಿಗೆ:

1. ಮಹಾಲೇಖಪಾಲರು, ಲೆಕ್ಕ ತಪಾಸಣೆ/ಲೆಕ್ಕಪತ್ರ, ಕರ್ನಾಟಕ ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
3. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
5. ವಿಶೇಷ ಆಯುಕ್ತರು (ಯೋಜನೆ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
6. ಪ್ರಧಾನ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
7. ಮುಖ್ಯ ಲೆಕ್ಕಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ 3 ಮತ್ತು 9), ವಿಧಾನಸೌಧ, ಬೆಂಗಳೂರು.
9. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.
10. ಸರ್ಕಾರದ ಉಪ ಕಾರ್ಯದರ್ಶಿಗಳು-3 ರವರ ಆಪ್ತ ಸಹಾಯಕರು, ನಗರಾಭಿವೃದ್ಧಿ ಇಲಾಖೆ.
11. ಕಾರ್ಯಪಾಲಕ ಅಭಿಯಂತರರು (ತಾಂತ್ರಿಕ ಕೋಶ), ನಗರಾಭಿವೃದ್ಧಿ ಇಲಾಖೆ.
12. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

Scanned by TapScanner

UDD 276 MNL 2020

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಆಯುಕ್ತರು/ಪಿಆರ್(ಜಿ)/466/2020-21

ಆಯುಕ್ತರವರ ಕಛೇರಿ,
ಎನ್.ಆರ್.ಚೌಕ, ಬೆಂಗಳೂರು-02
ದಿನಾಂಕ: 04.12.2020

ರವರಿಗೆ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ನಗರಾಭಿವೃದ್ಧಿ ಇಲಾಖೆ
ವಿಕಾಸ ಸೌಧ
ಬೆಂಗಳೂರು

| | |
|---|---|
| ವಿಷಯ:- | 2018-19, 2019-20 ಮತ್ತು 2020-21ನೇ ಸಾಲಿನ ಮಾನ್ಯ ಮುಖ್ಯ ಮಂತ್ರಿಗಳ *ನವ ನಗರೋತ್ಥಾನ ಯೋಜನೆಯಡಿಯಲ್ಲಿ* ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿ Developments Works to be under taken in Ward No:05 of BBMP around solid waste disposal processing units Bellahalli, Bagaluru and Kattigenahalli Byatarayanapura constituency ಯೋಜನೆಯ ಆಡಳಿತಾತ್ಮಕ ಅನುಮೋದನೆ ಮತ್ತು ಟೆಂಡರ್ ಮಂಜೂರಾತಿ ನೀಡುವ ಬಗ್ಗೆ(ಅಂದಾಜು ಮೊತ್ತ ರೂ.1250.00 ಲಕ್ಷಗಳು) |
| ಉಲ್ಲೇಖ :1. | ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎನ್‌ವೈ 2018 ದಿನಾಂಕ: 20-09-2019 |
| 2 | ಆರ್ಥಿಕ ಮೌಲ್ಯಮಾಪನ ಸಮಿತಿ ಸಭೆ ದಿನಾಂಕ: |
| 3 | Work Indent No: BBMP/2020-21/OW/WORK_INDENT42672/Call-2 |

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರಲ್ಲಿ 2018-19, 2019-20 ಮತ್ತು 2020-21ನೇ ಸಾಲಿನ ಮಾನ್ಯ ಮುಖ್ಯ ಮಂತ್ರಿಗಳ *ನವ ನಗರೋತ್ಥಾನ ಯೋಜನೆಯಡಿಯಲ್ಲಿ* ಒದಗಿಸಿರುವ ರೂ.8015.37 ಕೋಟಿಗಳ ಅನುದಾನದಲ್ಲಿ ವಿವಿಧ ಅನುಬಂಧಗಳಲ್ಲಿ ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ:ನಅಇ 375 ಎಂ.ಎನ್.ವೈ 2018 ದಿನಾಂಕ: 20-09-2019 ಕ್ರಿಯಾ ಯೋಜನೆ ಅನುಬಂಧ-5ರ ಕಾಮಗಾರಿಗಳು ಘನತ್ಯಾಜ್ಯ ನಿರ್ವಹಣೆ ಅಡಿಯಲ್ಲಿ ಮಂಜೂರಾತಿ ನೀಡಿದ್ದು, ಸದರಿ ಕಾಮಗಾರಿಗಳು ಕನ್ನಳ್ಳಿ, ಸೀಗೆಹಳ್ಳಿ, ದೊಡ್ಡಬಿದರಕಲ್ಲು, ಮತ್ತು ಮಾವಳ್ಳಿಪುರ ಘನತ್ಯಾಜ್ಯ ವಿಲೇವಾರಿ ಘಟಕಗಳ ಸುತ್ತ ಮುತ್ತಲಿನ ಹಳ್ಳಿಗಳ ವ್ಯಾಪ್ತಿಯಲ್ಲಿ ಮೂಲ ಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಯಲಹಂಕ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕೈಗೊಳ್ಳಲು ಅನುಮೋದನೆ ನೀಡಿರುವಂತೆ ಕ್ರಿಯಾ ಯೋಜನೆ ಪಟ್ಟಿ ಅನುಬಂಧ-5ರ ಕ್ರಮ ಸಂಖ್ಯೆ: 23ರಲ್ಲಿ Developments Works to be under taken in Ward No:05 of BBMP around solid waste disposal processing units

ನಗರಾಭಿವೃದ್ಧಿ ಇಲಾಖೆ
(ಪೌರಕೃತ ಮಂಡಳಿ ವಿಧಾನ ಶಾಖೆ)
ಸಂಖ್ಯೆ: ನಅಇ 388 ಪಮಂವಿ 2020
ವಿಕಾಸ ಸೌಧ, ಬೆಂಗಳೂರು-1

Bellahalli, Bagaluru and Kattigenahalli Byatarayanapura constituency

ಮೊತ್ತ ರೂ 1250.00 ಲಕ್ಷಗಳಿಗೆ ಜಾಬ್ ಸಂಖ್ಯೆಯನ್ನು ಪಡೆಯಲಾಗಿರುತ್ತದೆ.

ಯಲಹಂಕ ವಲಯ ಯೋಜನಾ ವಿಭಾಗ ಕಛೇರಿಯಿಂದ ಟೆಂಡರ್ ಸಂಖ್ಯೆ: BBMP/YNK/EE (Project)/TEND/07/2020-21, Date:10-07-2020 ರಂತೆ ದ್ವಿಲಕೋಟಿ ಪದ್ಧತಿಯಲ್ಲಿ ಇ-ಪ್ರಕ್ಯೂರ್‌ಮೆಂಟ್ ಮೂಲಕ ರೂ.1047.05 ಲಕ್ಷಗಳಿಗೆ (ಟೆಂಡರ್‌ಗಿಟ್ಟ ಮೊತ್ತ) ಟೆಂಡರ್ ಆಹ್ವಾನಿಸಲಾಗಿರುತ್ತದೆ.

ಸದರಿ ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ದಿನಾಂಕ: 28-07-2020 ರಂದು ತೆರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿ ಮೂರು ಜನ ಗುತ್ತಿಗೆದಾರರು ಭಾಗವಹಿಸಿದ್ದು ವಿವರ ಕೆಳಕಂಡಂತಿರುತ್ತದೆ.

| ಕ್ರ ಸಂ | ಕಾಮಗಾರಿಯ/ ಯೋಜನೆಯ ಹೆಸರು | ಯೋಜನಾ ಮೊತ್ತ ರೂ. (ಲಕ್ಷಗಳಲ್ಲಿ) | ಟೆಂಡರ್ ಗಿಟ್ಟ ಮೊತ್ತ ರೂ. | ಟೆಂಡರ್‌ನಲ್ಲಿ ಭಾಗವಹಿಸಿರುವ ಗುತ್ತಿಗೆದಾರರು | ಷರಾ |
|---|---|---|---|---|---|
| 1 | Developments Works to be under taken in Ward No:05 of BBMP around solid waste disposal processing units Bellahalli, Bagaluru and Kattigenahalli Byatarayanapura constituency | 1250.00 | 104705392.72 | Sri. ATTAPPANAHALLI GIRIYAPPA NARAYANASWAMY | ತಾಂತ್ರಿಕವಾಗಿ ಅರ್ಹರಾಗಿರುತ್ತಾರೆ |
| | | | | Sri. V Krishna Reddy (V KRISHNAREDDY) | ತಾಂತ್ರಿಕವಾಗಿ ಅರ್ಹರಾಗಿರುತ್ತಾರೆ |
| | | | | Sri. C G CHANDRAPPA (CGC INFRA PROJECTS PRIVATE LIMITED) | ತಾಂತ್ರಿಕವಾಗಿ ಅನರ್ಹರಾಗಿರುತ್ತಾರೆ |

ಸದರಿ ಗುತ್ತಿಗೆದಾರರಾದ Sri. ATTAPPANAHALLI GIRIYAPPA NARAYANASWAMY ಮತ್ತು Sri. V Krishna Reddy (V KRISHNAREDDY) ರವರು ತಾಂತ್ರಿಕವಾಗಿ ಅರ್ಹತೆ ಹೊಂದಿರುವುದರಿಂದ ದಿನಾಂಕ: 17-11-2020 ರಂದು ಮಾನ್ಯ ಆಯುಕ್ತರವರ ಅಧ್ಯಕ್ಷತೆಯಲ್ಲಿ ನಡೆದ ತಾಂತ್ರಿಕ ಮೌಲ್ಯಮಾಪನ ಸಮಿತಿ ಸಭೆಯಲ್ಲಿ ತಾಂತ್ರಿಕ ಬಿಡ್‌ಗೆ ಅನುಮೋದನೆ ನೀಡಿ ಆರ್ಥಿಕ ಬಿಡ್‌ನ್ನು ತೆರೆಯಲು ಅನುಮೋದನೆ ನೀಡಿರುವಂತೆ ದಿನಾಂಕ:23-11-2020ರಂದು ತೆರೆಯಲಾಗಿರುತ್ತದೆ. ವಿವರಗಳು ಈ ರೀತಿ ಇರುತ್ತದೆ.

| ಕ್ರ ಸಂ | ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹರಾದ ಗುತ್ತಿಗೆದಾರರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಟೆಂಡರ್ ಗಿಟ್ಟ ಮೊತ್ತ (ರೂಗಳಲ್ಲಿ) | ಟೆಂಡರ್‌ನಲ್ಲಿ ಸಮೂದಿಸಿರುವ ಮೊತ್ತ (ರೂಗಳಲ್ಲಿ) | ಟೆಂಡರ್ ಗಿಟ್ಟ ಮೊತ್ತ ದರಗಳಿಗೆ ಹೋಲಿಸಿದಾಗ |
|---|---|---|---|---|---|
| 1 | Sri. ATTAPPANAHALLI GIRIYAPPA NARAYANASWAMY | 1250.00 | 10,47,05,392.72 | 10,97,25,017.78 | (+)4.79% |
| 2 | Sri. V Krishna Reddy (V KRISHNAREDDY) | | | 11,51,44,989.03 | (+)9.97% |

Scanned by TapScanner

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಕಾಮಗಾರಿಯ ಅಂದಾಜು ಮೊತ್ತ ರೂ.1250.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಕಡಿಮೆ ಮೊತ್ತದ ಟೆಂಡರ್‌ದಾರರಾದ Sri.ATTAPPANAHALLI GIRIYAPPA NARAYANASWAMY ರವರ ಟೆಂಡರ್‌ನ ಮೊತ್ತ ರೂ.10,97,25,017.78 ಶೇ.4.98% ರಷ್ಟು ಹೆಚ್ಚುವರಿ ದರಗಳಿಗೆ ಮಂಜೂರಾತಿಯನ್ನು ನೀಡಲು ಕೋರಲಾಗಿದೆ.

ತಮ್ಮ ವಿಶ್ವಾಸಿ

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

Scanned by TapScanner

202

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ದಿನಾಂಕ 4.12.2020 ರಂದು ಮಾನ್ಯ ಆಯುಕ್ತರು ರವರ ಅಧ್ಯಕ್ಷತೆಯಲ್ಲಿ ರಚಿತವಾಗಿರುವ 2018-19, 2019-20 ಮತ್ತು 2020-21ನೇ ಸಾಲಿನ ಮಾನ್ಯ ಮುಖ್ಯ ಮಂತ್ರಿಗಳ *ನವ ನಗರೋತ್ಥಾನ* ಯೋಜನೆಯಡಿಯಲ್ಲಿ ಘೋಷಿಸಿರುವ ಕಾಮಗಾರಿಗಳ ಆರ್ಥಿಕ ಮೌಲ್ಯಮಾಪನ ಸಮಿತಿ ಸಭೆಯ ನಡವಳಿಗಳು

ವಿಷಯ ಸಂಖ್ಯೆ: 01

| Sl. No | Name of work |
|---|---|
| 1 | Developments Works to be under taken in Ward No:05 of BBMP around solid waste disposal processing units Bellahalli, Bagaluru and Kattigenahalli Byatarayanapura constituency |

| ಕ್ರ.ಸಂ | ಸಂಕ್ಷಿಪ್ತ ವಿವರ | | ದಿನಾಂಕ |
|---|---|---|---|
| 1 | ಅಂದಾಜು ಮೊತ್ತ | ರೂ. 1250.00 ಲಕ್ಷಗಳು | |
| 2 | ದರಪಟ್ಟಿ ಅಳವಡಿಕೆ | 2018-19ನೇ ಸಾಲಿನ ಲೋ.ಇ ದರಪಟ್ಟಿಯಂತೆ | |
| 3 | ಜಾಬ್ ಕೋಡ್ ಸಂಖ್ಯೆ | 005-20-000054 | |
| 4 | ಲೆಕ್ಕಶೀರ್ಷಿಕೆ | "ಮಾನ್ಯ ಮುಖ್ಯ ಮಂತ್ರಿಗಳ ನವ ನಗರೋತ್ಥಾನ ಯೋಜನೆ- ಘನತ್ಯಾಜ್ಯ ನಿರ್ವಹಣೆ ಪಿ-3747 | |
| 5 | ಆಡಳಿತಾತ್ಮಕ ಮಂಜೂರಾತಿ | ಸಕ್ಷಮ ಪ್ರಾಧಿಕಾರದಿಂದ ನಿರೀಕ್ಷಿಸಲಾಗಿದೆ | |
| 6 | ತಾಂತ್ರಿಕ ಮಂಜೂರಾತಿ | ಬಿಬಿಎಂಪಿ/ಮುಅ/ತಾಂ.ಮ/ಯವ/ಪಿಆರ್/34/2020-21 | 17-06-2020 |
| 7 | ಕರಡು ಟೆಂಡರ್ ಅನುಮೋದನೆ | ಮುಖ್ಯ ಅಭಿಯಂತರರು ಯಲಹಂಕ ವಲಯ | |
| 8 | ಟೆಂಡರ್‌ಗೆ ಇಟ್ಟ ಮೊತ್ತ | ರೂ.10,47,05,392.72 | |
| 10 | ಟೆಂಡರ್ ಪ್ರಕಟಣೆ ಸಂಖ್ಯೆ | BBMP/YNK/EE(Project)/TEND/07/2020-21 | 10-07-2020 |
| 11 | ದಿನಪತ್ರಿಕೆಗಳಲ್ಲಿ ಪ್ರಕಟಣೆ | ವಿಜಯವಾಣಿ ಹಾಗೂ Times of India | 14-07-2020 |
| 12 | ಟೆಂಡರ್ ಸಲ್ಲಿಕೆಯ ಅಂತಿಮ ದಿನಾಂಕ | | 27-07-2020 |
| 13 | ಟೆಂಡರ್ ಪದ್ಧತಿ | ದ್ವಿ ಲಕೋಟೆ ಪದ್ಧತಿ | |
| 14 | ಉಪಯೋಗಿಸಿದ Standard Bid document | Standard document:KW-4 | |
| 15 | E-Procurement Indent No. | BBMP/2020-21/OW/ WORK_INDENT-42672/call-2 | |

Scanned by TapScanner

ಈ ಮೇಲಿನ ಪ್ರಸ್ತಾವನೆಗೆ 2018-19, 2019-20 ಮತ್ತು 2020-21ನೇ ಸಾಲಿನ ಮಾನ್ಯ ಮಂತ್ರಿಗಳ ನವ ನಗರೋತ್ಥಾನ ಯೋಜನೆಯಡಿಯಲ್ಲಿ ಒದಗಿಸಿರುವ ರೂ.8015.37 ಕೋಟಿಗಳ ಅನುದಾನವನ್ನು ಕೈಗೊಳ್ಳುವ ಕಾಮಗಾರಿಗಳ ಕ್ರಿಯಾಯೋಜನೆಗೆ ಸರ್ಕಾರ ಆದೇಶ ಸಂಖ್ಯೆ:ನಅಇ 375 ಎಂ.ಎಸ್.ಪಿ 2019, ದಿನಾಂಕ: 20-09-2019 ಅನುಬಂಧ-5ರ ಕ್ರ.ಸಂಖ್ಯೆ-23ರ ಕಾಮಗಾರಿಯ ಒಟ್ಟು ಮೊತ್ತ ರೂ.1250.00 ಲಕ್ಷಗಳಿಗೆ ಜಾಬ್ ಸಂಕೇತ ದೊರತ್ತಿದ್ದು, ಈ ಕಾಮಗಾರಿಗೆ ದಿನಾಂಕ: 10-07-2020ರಂದು ದ್ವಿ ಲಕೋಟೆ ಇ-Procurement ಪದ್ಧತಿಯಲ್ಲಿ ರೂ.1250.00 ಲಕ್ಷಗಳಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಟೆಂಡರ್‌ನಲ್ಲಿ ಮೂರು ಜನ ಬಿಡ್‌ದಾರರು ಭಾಗವಹಿಸಿದ್ದು, ಬಿಡ್‌ದಾರರಾದ Sri. ATTAPPANAHALLI GIRIYAPPA NARAYANASWAMY, Sri. V Krishna Reddy (V KRISHNAREDDY)ರವರು ತಾಂತ್ರಿಕವಾಗಿ ಆರ್ಹರಾಗಿರುತ್ತಾರೆ. ಮತ್ತು ಸದರಿ ಬಿಡ್‌ದಾರರ ಪೈಕಿ Sri. C G CHANDRAPPA (CGC INFRA PROJECTS PRIVATE LIMITED) ರವರು ತಾಂತ್ರಿಕವಾಗಿ ಆನರ್ಹರಾಗಿದ್ದು, ಮಾನ್ಯ ಆಯುಕ್ತರು ಹಾಗೂ ಅಧ್ಯಕ್ಷರು, ತಾಂತ್ರಿಕ ಮೌಲ್ಯಮಾಪನ/ ಆರ್ಥಿಕ ಮೌಲ್ಯಮಾಪನ ಮತ್ತು ದರ ಸಂಧಾನ ಸಮಿತಿ ರವರ ಅಧ್ಯಕ್ಷತೆಯಲ್ಲಿ ದಿನಾಂಕ: 17-11-2020ರಂದು ನಡೆದ ತಾಂತ್ರಿಕ ಮೌಲ್ಯಮಾಪನ ಸಮಿತಿ ನಡವಳಿಗಳಂತೆ ಮೇಲ್ಕಂಡ ಇಬ್ಬರು ಗುತ್ತಿಗೆದಾರರ ತಾಂತ್ರಿಕ ಬಿಡ್‌ಯನ್ನು ಅಂಗೀಕರಿಸಿ ಆರ್ಥಿಕ ಬಿಡ್ ತೆರೆಯಲು ತೀರ್ಮಾನಿಸಲಾಗಿರುತ್ತದೆ.

ಮೇಲ್ಕಂಡ ನಿರ್ಣಯದಂತೆ ದಿನಾಂಕ: 23-11-2020 ರಂದು ಆರ್ಥಿಕ ಬಿಡ್ ತೆರೆಯಲಾಗಿದ್ದು, ವಿವರ ಕೆಳಕಂಡಂತೆ ಇರುತ್ತದೆ.

| ಕ್ರ ಸಂ. | ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹರಾದ ಗುತ್ತಿಗೆದಾರರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಟೆಂಡರ್ ಗಿಟ್ಟ ಮೊತ್ತ (ಲಕ್ಷಗಳಲ್ಲಿ) | ಟೆಂಡರ್‌ನಲ್ಲಿ ನಮೂದಿಸಿರುವ ಮೊತ್ತ (ರೂಗಳಲ್ಲಿ) | ಟೆಂಡರ್ ಗಿಟ್ಟ ಮೊತ್ತ ದರಗಳಿಗೆ ಹೋಲಿಸಿದಾಗ |
|---|---|---|---|---|---|
| 1 | Sri. ATTAPPANAHALLI GIRIYAPPA NARAYANASWAMY | 1250.00 | 10,47,05,392.72 | 10,97,25,017.78 | (+)4.79% |
| 2 | Sri. V Krishna Reddy (V KRISHNAREDDY) | | | 11,51,44,989.03 | (+)9.97% |

ಸದರಿ ಟೆಂಡರ್‌ನಲ್ಲಿ ಕನಿಷ್ಟ ದರ ನಮೂದಿಸಿರುವ ಗುತ್ತಿಗೆದಾರರಾದ Sri. ATTAPPANAHALLI GIRIYAPPA NARAYANASWAMY ರವರು ರೂ. 10,97,25,017.78 ಗಳನ್ನು ಕರ್ನಾಟಕ ಲೋಕೋಪಯೋಗಿ 2018-19ನೇ ಸಾಲಿನ ದರಪಟ್ಟಿ ದರಗಳಿಗೆ ಹೋಲಿಸಿದಾಗ ಶೇ. 4.79%ರಷ್ಟು ಹೆಚ್ಚುವರಿಯಾಗಿರುತ್ತದೆ. ಸದರಿ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ ಎಲ್-1 ಗುತ್ತಿಗೆದಾರರು ನಮೂದಿಸಿರುವ ದರಗಳಿಗೆ ಸಂಬಂಧಿಸಿದಂತೆ ಆರ್ಥಿಕ ಮೌಲ್ಯಮಾಪನ ಸಮಿತಿಯ ಹಿಂದೆ ಸೂಕ್ತ ಕ್ರಮಕ್ಕಾಗಿ ಮಂಡಿಸಲು ಅನುಮೋದನೆ ಸಲ್ಲಿಸಿದೆ.

Scanned by TapScanner

ತೀರ್ಮಾನ:

ಸದರಿ ಟೆಂಡರ್‌ನಲ್ಲಿ ಕನಿಷ್ಟ ದರ ಸಮೂದಿಸಿರುವ ಗುತ್ತಿಗೆದಾರರಾದ Sri. ATTAPPANAHALLI GIRIYAPPA NARAYANASWAMY ರವರು ರೂ.10,97,25,017.78ಗಳನ್ನು ನಮೂದಿಸಿರುತ್ತಾರೆ. ಈ ಮೊಪ್ಪವನ್ನು ಕರ್ನಾಟಕ ಲೋಕೋಪಯೋಗಿ 2018–19ನೇ ದರಪಟ್ಟಿ ದರಗಳಿಗೆ ಹೋಲಿಸಿದಾಗ ಶೇ.4.79% ರಷ್ಟು ಹೆಚ್ಚುವರಿಯಾಗಿದ್ದು, ಸದರಿ ದರಗಳಿಗೆ ಟೆಂಡರ್ ಅನುಮೋದನೆ ಹಾಗೂ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ರಚಿತವಾಗಿರುವ ಅಧಿಕಾರಯುಕ್ತ ಸಮಿತಿಯ ಮುಂದೆ ಮಂಡಿಸುವುದು ಸೂಕ್ತವೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಿಶೇಷ ಆಯುಕ್ತರು (ಯೋಜನೆ)
ಬಿಬಿಎಂಪಿ

ವಿಶೇಷ ಆಯುಕ್ತರು (ಹಣಕಾಸು)
ಬಿಬಿಎಂಪಿ

ವಿಶೇಷ ಆಯುಕ್ತರು (ಆಡಳಿತ)
ಬಿಬಿಎಂಪಿ

ಮುಖ್ಯ ಅಭಿಯಂತರರು
ಯಲಹಂಕ ವಲಯ

ಪ್ರಧಾನ ಅಭಿಯಂತರರು
ಬಿಬಿಎಂಪಿ

ಮುಖ್ಯ ಲೆಕ್ಕಾಧಿಕಾರಿಗಳು
ಬಿಬಿಎಂಪಿ

ಆಯುಕ್ತರು
ಹಾಗೂ ಅಧ್ಯಕ್ಷರು, ತಾಂತ್ರಿಕ ಮೌಲ್ಯಮಾಪನ
/ಆರ್ಥಿಕ ಮೌಲ್ಯ ಮಾಪನ ಮತ್ತು ದರಸಂಧಾನ ಸಮಿತಿ
(ಅಧ್ಯಕ್ಷರು)

Scanned by TapScanner

ಕರ್ನಾಟಕ ಸರ್ಕಾರದ ಅನುದಾನದಲ್ಲಿ ಕೈಗೊಳ್ಳಬೇಕಿರುವ ಕಾಮಗಾರಿಗಳ ಟೆಂಡರ್ ಅನುಮೋದನೆಗಾಗಿ ಅಧಿಕಾರಯುಕ್ತ ಸಮಿತಿಯ ಮುಂದೆ ಸಲ್ಲಿಸಲಾಗಿರುವ ಕಾಮಗಾರಿಗಳ ಕುರಿತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಸಲ್ಲಿಸಬೇಕಿರುವ ಪ್ರಪತ್ರ ಮತ್ತು ಘೋಷ್ವಾರೆ

(10)

## ಟೆಂಡರ್ ವಿವರಗಳು

| | |
|---|---|
| ಟೆಂಡರ್ ಮೊದಲನೇ ಕರೆ ದಿನಾಂಕ | ದಿನಾಂಕ: 17–06–2020 |
| ಟೆಂಡರ್ ಪ್ರಕಾರ | ಅಲ್ಪಾವಧಿ ಟೆಂಡರ್ |
| ಬಿಡ್ ಸಲ್ಲಿಸಲು ಕೊನೆಯ ದಿನಾಂಕ | ದಿನಾಂಕ: 06–07–2020 |
| ಟೆಂಡರ್ ಎರಡನೇ ಕರೆ ದಿನಾಂಕ | ದಿನಾಂಕ: 10–07–2020 |
| ಟೆಂಡರ್ ಎರಡನೇ ಕರೆಗೆ ಕಾರಣ | ಯಾವುದೇ ಬಿಡ್‌ದಾರರು ಭಾಗವಹಿಸಿರುವುದಿಲ್ಲ |
| ಟೆಂಡರ್ ಪ್ರಕಾರ | ಅಲ್ಪಾವಧಿ ಟೆಂಡರ್ |
| ಬಿಡ್ ಸಲ್ಲಿಸಲು ಕೊನೆಯ ದಿನಾಂಕ | ದಿನಾಂಕ:27–07–2020 |

ಒ.ನೋ:ಅನ್ವಯವಾಗುವಂತಿದ್ದರೆ ಟೆಂಡರ್‌ನ ಇತರ ಕರೆಗಳ ವಿವರಗಳನ್ನು ಎರಡನೆ ಕರೆ ವಿವರಗಳಂತೆ ದಾಖಲಿಸುವುದು

| | | | |
|---|---|---|---|
| ಒಟ್ಟು ಬಿಡ್‌ದಾರರ ಸಂಖ್ಯೆ: | 3 | | |
| ತಾಂತ್ರಿಕ ಮೌಲ್ಯಮಾಪನದಲ್ಲಿ ಯಶಸ್ವಿಯಾದ ಬಿಡ್ದುದಾರರ ಸಂಖ್ಯೆ: | 2 | | |
| ತಾಂತ್ರಿಕ ಮೌಲ್ಯಮಾಪನದಲ್ಲಿ ಅಯಶಸ್ವಿ ಬಿಡ್ದುದಾರರ ಸಂಖ್ಯೆ: | 1 | | |
| ತೆರೆದ ಆರ್ಥಿಕ ಬಿಡ್‌ಗಳ ಸಂಖ್ಯೆ | 2 | | |
| ಎಲ್–1 ಬಿಡ್ ಮೊತ್ತ | Rs.109725017.78 | % ದರ ವ್ಯತ್ಯಾಸ | 4.79%(ಹೆಚ್ಚು) |
| ಎಲ್–2 ಬಿಡ್ ಮೊತ್ತ | Rs.115144989.03 | % ದರ ವ್ಯತ್ಯಾಸ | 9.97%(ಹೆಚ್ಚು) |
| ದರ ಸಂಧಾನ | ಕೈಗೊಳ್ಳಲಾಗಿರುತ್ತದೆ | | |
| ದರ ಸಂಧಾನದ ನಂತರದ ಮೊತ್ತ | | % ದರ ವ್ಯತ್ಯಾಸ | |

## ಏಕೈಕ ಬಿಡ್ದುದಾರರಿರುವ ಟೆಂಡರ್‌ಗಳು ವಿವರ

| | | |
|---|---|---|
| ಏಕೈಕ ಬಿಡ್ದುದಾರರಿರುವ ಭಾಗವಹಿಸಿದ ಕಾರಣ ಟೆಂಡರ್ ಇನ್ವೊಮ್ಮೆ ಕರೆಯಲಾಗಿದೆಯೇ? | | |
| ಟೆಂಡರ್‌ಗೆ ಸಲ್ಲಿಕೆಗೆ ಅಗತ್ಯ ಕಾಲಾವಧಿ ನೀಡಲಾಗಿದೆಯೇ? | | ಅನ್ವಯಿಸುವುದಿಲ್ಲ |
| ಏಕೈಕ ಬಿಡ್ದುದಾರರೊಂದಿಗೆ ದರಸಂಧಾನ ಕೈಗೊಳ್ಳಾಲಾಗಿದೆಯೆ? | | – |
| ಮೂಲ ಬಿಡ್ ಮೊತ್ತ | | – |
| ದರಸಂಧಾನ ಕೈಗೊಂಡಿದ್ದರೆ ಮಾರ್ಪಾಡಿತ ಮೊತ್ತ | | – |
| ಮೂಲ ಬಿಡ್ ಪ್ರತಿಶತ ದರ ವ್ಯತ್ಯಾಸ | | – |
| ದರ ಸಂಧಾನದ ನಂತರ ಪ್ರತಿಶತ ದರ ವ್ಯತ್ಯಾಸ | – | – |
| ಸದೃತ ಕಾಮಗಾರಿಗಳಲ್ಲಿ ಈ ಹಿಂದೆ ಅಧಿಕಾರಯುಕ್ತ ಸಮಿತಿಯಲ್ಲಿ ಅನುಮೋದಿಸಿರುವ ಪ್ರತಿಶತ ದರ | – | – |
| ಏಕೈಕ ಬಿಡ್ದುದಾರರಿಗೆ ಗುತ್ತಿಗೆ ನೀಡಲು ಸಮರ್ಥನೆಗಳು | – | |

ಮುಖ್ಯ ಅಭಿಯಂತರರು (ಯಲಹಂಕ ವಲಯ)

ವಿ.ಪ (ಯೋಜನೆ)
ಬಿಬಿಎಂಪಿ

ಆಯುಕ್ತರು
ಬಿಬಿಎಂಪಿ.

Scanned by TapScanner

ಕರ್ನಾಟಕ ಸರ್ಕಾರದ ಅನುದಾನದಲ್ಲಿ ಕೈಗೊಳ್ಳಬೇಕಿರುವ ಕಾಮಗಾರಿಗಳ ಟೆಂಡರ್ ಅನುಮೋದನೆಗಾಗಿ ಅಧಿಕಾರಯುಕ್ತ ಸಮಿತಿಯ ಮುಂದೆ ಸಲ್ಲಿಸಲಾಗಿರುವ ಪ್ಯಾಕೇಜ್ ಕುರಿತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಸಲ್ಲಿಸಬೇಕಿರುವ ಪ್ರಮಾಣ ಪತ್ರ ಮತ್ತು ಘೋಷ್ವಾರೆ

(18)

| | |
|---|---|
| ಪ್ಯಾಕೇಜಿನ ಹೆಸರು (ಆಂಗ್ಲ ಭಾಷೆಯಲ್ಲಿ) | Developments Works to be under taken in Ward No:05 of BBMP around solid waste disposal processing units Bellahalli, Bagaluru and Kattigenahalli Byatarayanapura constituency |
| ಟೆಂಡರ್ ಆಮ್ವಾನಿಸಿದ ಅಧಿಕಾರಿ/ವಿಭಾಗ | ಶ್ರೀ.ದೇವೇಂದ್ರ ನಾಯಕ್, ಕಾ.ಪಾ.ಅ (ಯೋ.ವಿ) ಯಲಹಂಕ ವಲಯ |
| ವಿಭಾಗದ ಮುಖ್ಯ ಅಭಿಯಂತರರ ವಿವರ | ಶ್ರೀ.ಎಸ್.ಪಿ.ರಂಗನಾಥ್ ಮುಖ್ಯ ಅಭಿಯಂತರರು ಯಲಹಂಕ ವಲಯ |
| ಕ್ರಿಯಾಯೋಜನೆಯ ಆನುಮೋದನೆ ಆದೇಶ ಸಂಖ್ಯೆ ಮತ್ತು ದಿನಾಂಕ | ಸರ್ಕಾರದ ಆದೇಶ ಸಂಖ್ಯೆ: ನಅಇ 375 ಎಂಎಸ್‌ಪಿ 2018 ದಿನಾಂಕ: 20-09-2019 |

| ಕ್ರಸಂ | ಪ್ಯಾಕೇಜಿನಲ್ಲಿ ಸೇರಿರುವ ಕಾಮಗಾರಿಗಳು (ಆಂಗ್ಲ ಭಾಷೆಯಲ್ಲಿ) | ಟೆಂಡರ್‌ಗಿಟ್ಟ ಮೊತ್ತ (ರೂ.ಗಳು) | ಕಾಮಗಾರಿಯನ್ನು ಅನುಮೋದಿಸಿರುವ ಕ್ರಿಯಾಯೋಜನೆಯ ವಿವರಗಳು | | ಕ್ರಿಯಾಯೋಜನೆಯಲ್ಲಿ ಅನುಮೋದಿತ ಮೊತ್ತ (ರೂ.ಗಳು) |
|---|---|---|---|---|---|
| | | | ಅನುಬಂಧ ಸಂಖ್ಯೆ | ಕಾಮಗಾರಿ ಕ್ರಮ ಸಂಖ್ಯೆ | |
| 1 | Developments Works to be under taken in Ward No:05 of BBMP around solid waste disposal processing units Bellahalli, Bagaluru and Kattigenahalli Byatarayanapura constituency | ರೂ.1047.05 | 5 | 23 | ರೂ.1250.00 ಲಕ್ಷಗಳು |
| ಒಟ್ಟು ಟೆಂಡರ್‌ಗಿಟ್ಟ ಮೊತ್ತ (ರೂ.ಗಳು) | | ರೂ.1047.05 | | ಒಟ್ಟು ಅನುಮೋದಿತ ಮೊತ್ತ(ರೂ.ಗಳು) | ರೂ.1250.00 ಲಕ್ಷಗಳು |

| | | | | | |
|---|---|---|---|---|---|
| ಬಿಡ ಮೊತ್ತ (ರೂಗಳು | ರೂ.109725017.78 | ಪ್ರಸಕ್ತ (2018-19)ನೇ ಸಾಲಿನ ಲೋ.ಇ ದರಪಟ್ಟಿಯಂತೆ % ದರವ್ಯತ್ಯಾಸ | 4.79% (ಹೆಚ್ಚು) | ಒಟ್ಟು ಅನುಮೋದಿತ ಮೊತಕ್ಕೆ % ದರ ವ್ಯತ್ಯಾಸ | - |
| | | | | ಇಷ್ಯೂ ರೇಟ್ ಮೊತ್ತಕ್ಕೆ % ದರ ವ್ಯತ್ಯಾಸ (ಅನ್ವಯವಾಗುವಂತಿದ್ದರೆ) | - |

ಕಾರ್ಯಪಾಲಕ ಅಭಿಯಂತರರು,
ಯೋಜನಾ ವಿಭಾಗ, ಯಲಹಂಕ ವಲಯ
ಬಿಬಿಎಂಪಿ, ಬೆಂಗಳೂರು

ಮುಖ್ಯ ಅಭಿಯಂತರರು,
ಯಲಹಂಕ ವಲಯ, ಬಿಬಿಎಂಪಿ

Scanned by TapScanner

(17)

ಕರ್ನಾಟಕ ಸರ್ಕಾರದ ಅನುದಾನದಲ್ಲಿ ಕೈಗೊಳ್ಳಬೇಕಾದ ಕಾಮಗಾರಿಗಳ ಟೆಂಡರ್ ಅನುಮೋದನೆಗಾಗಿ ಅಧಿಕಾರಯುಕ್ತ ಸಮಿತಿಯ ಮುಂದೆ ಸಲ್ಲಿಸಲಾಗಿರುವ ಪ್ಯಾಕೇಜ್ ಸಹಿತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಸಲ್ಲಿಸಬೇಕಾದ ಪ್ರಮಾಣ ಪತ್ರ ಮತ್ತು ಫೋಟ್ಟಾರ್.

## ಮುಖ್ಯ ಅಭಿಯಂತರರು ಪ್ರಮಾಣ ಪತ್ರ

1) ಈ ಕಾಮಗಾರಿಯ ಅಂದಾಜು ಪಟ್ಟಿಯನ್ನು ಕೂಲಂಕುಷವಾಗಿ ಪರಿಶೀಲಿಸಿದೆ. ಸದರಿ ಅಂದಾಜು ಪಟ್ಟಿಯಲ್ಲಿ ಯಾವುದೇ ಹೆಚ್ಚುವರಿ ಅಥವಾ ಅನಗತ್ಯ ಅಂಶಗಳನ್ನು ಒಳಗೊಂಡಿಲ್ಲ ಮತ್ತು ಕಾಮಗಾರಿಗೆ ಅಗತ್ಯ ವಿಶಿಷ್ಟ ವಿವರಣೆಗಳನ್ನಷ್ಟೇ ಒಳಗೊಂಡಿರುತ್ತದೆ.
2) ಕಾಮಗಾರಿ ಅಂಶಗಳ ವಿಶಿಷ್ಟ ವಿವರಣೆಯು ಲೋಕೋಪಯೋಗಿ ಇಲಾಖೆಯ ದರಪಟ್ಟಿ ಹಾಗೂ ಪಿ.ಆರ್.ಇ.ಡಿ ದರಪಟ್ಟಿಯಲ್ಲಿ ಸೂಚಿಸಿರುವಂತೆ ಇದೆ.
3) ಈ ಕಾಮಗಾರಿಯು ಭಾಗಶಃ ಅಥವಾ ಪೂರ್ಣವಾಗಿ ಇತರೆ ಯಾವುದೇ ಯೋಜನೆಗಳಲ್ಲಿ ಪುನರಾವರ್ತನೆಯಾಗಿರುವುದಿಲ್ಲ.
4) ಈ ಕಾಮಗಾರಿಯನ್ನು ಭಾಗಶಃ ಅಥವಾ ಪೂರ್ಣವಾಗಿ ಇತರೆ ಯಾವುದೇ ಅನುದಾನದಲ್ಲಿ ಅನುಷ್ಠಾನಗೊಳಿಸಲಾಗುತ್ತಿಲ್ಲ.
5) ಈ ಕಾಮಗಾರಿಯು ಈಗಾಗಲೇ ಪೂರ್ಣಗೊಂಡಿರುವ ಕಾಮಗಾರಿಗಳಲ್ಲಿ ಸೇರಿರುವುದಿಲ್ಲ.
6) ಈ ಕಾಮಗಾರಿಯ ಅನುಷ್ಠಾನದಿಂದ ಇತರೆ ಯಾವುದೇ ಕಾಮಗಾರಿಯ ಅನುಷ್ಠಾನ ನಿರ್ವಹಣಾ ಅವಧಿ(Maintenance period) ಅಥವಾ ದೋಷ ಬಾಧ್ಯತಾ ಅವಧಿ(Defects liability period) ಯನ್ನು ಉಲ್ಲಂಘಿಸುವ ಪ್ರಮೇಯ ಒದಗುವುದಿಲ್ಲ.
7) ಕಾಮಗಾರಿ ಸ್ಥಳಗಳ ಸ್ಥಳ ಪರಿಶೀಲನೆ ಕೈಗೊಂಡು ಮೇಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಿ ಕಾಮಗಾರಿಗಳ ಅನುಷ್ಠಾನದ ಅಗತ್ಯತೆಯನ್ನು ದೃಢೀಕರಿಸಿಕೊಂಡ ನಂತರವಷ್ಟೇ ಅಂದಾಜು ಪಟ್ಟಿ ತಯಾರಿಸಿ ಟೆಂಡರ್ ಕರೆದಿದ್ದು ಕಾಮಗಾರಿಗಳನ್ನು ಈ ನಂತರದಲ್ಲಿ ಕೈಬಿಡುವ ಅಥವಾ ಬದಲಾಯಿಸುವ ಅಗತ್ಯವಿರುವುದಿಲ್ಲ.

ಮುಖ್ಯ ಅಭಿಯಂತರರು
ಯಲಹಂಕ ವಲಯ,
ಬಿಬಿಎಂಪಿ, ಬೆಂಗಳೂರು-92.

Scanned by TapScanner